CITATION
IN THE COURT OF THE SENIOR CIVIL JUDGE AT CHITTAPUR.
G & W C No. 2/2026

Kanakappa ...Petitioner
V/s
All Concerned ...Respondent

Sri Kanakappa S/o Ramayya Dandagolikar, Age : Major, Occupation : Retired Government Employee, R/o Shahabad, Taluk Shahabad, District Kalaburagi.
...Petitioners
And
1. All Concerned
2. Navachetana Livelihoods Private Llimited, District Kalaburagi.
...Respondents

To,
All Concerned

Whereas the above named Petitioner has filed petition u/s 8 of Hindu Minority and Guardianship act 1956 R/w Sec. 7 of Guardians and wards act 1890 for seeking necessary permission for received the relief/compensation amount payable to the minor on account of the death of his mother Savita, under guardian of his, maternal grandfather of the minor child, Master Devansh, Sri Kanakappa S/o Ramayya Dandagolkar, i.e. Petitioner herein the above case.

If anybody having any right, title and interest over the Navachetana Livelihoods Private Limited, are hereby directed to appear before this court on **21-07-2026 at 11.00 am** in person or through an advocate duly instructed able to answer in the matter, failing which the matter will be determined on merits in your absence.

Given under my hand and seal of this court this the 29th day of June 2026 at Chittapur.

By order of the Court
Sd/- **Chief Ministerial Officer,**
Senior Civil Judge and CJM at Chitapur.

Advocate for the Petitioner.

ಸಾರ್ವಜನಿಕ ಪ್ರಕಟಣೆ

ನನ್ನ ಕಕ್ಷಿದಾರರಾದ ವೆಂಕಟಯ್ಯ ತಂದೆ ಶರಣಪ್ಪ ವಯಸ್ಸು : 40, ಸಾ: ದುಗನೂರ, ತಾ: ಸೇಡಂ, ಜಿ: ಕಲಬುರಗಿ ಅವರಿಗೆ ಸಂಬಂಧಿಸಿದ ಮೂಲ ಮಾರಾಟ ಪತ್ರ ನಂ. 1603/2013-14 ದಿನಾಂಕ : 23-08-2013ರ ಪ್ರಕಾರ ಕೃಷಿ ಭೂಮಿ ಸರ್ವೆ ನಂ. 286/3 ವಿಸ್ತೀರ್ಣ 00 ಎಕರೆ 16 ಗುಂಟೆ ಇರುತ್ತದೆ. ಮಾರಾಟ ಪತ್ರದ ಪ್ರಕಾರ ನನ್ನ ಕಕ್ಷಿದಾರರು ಇದರ ಮಾಲಿಕರು ಮತ್ತು ಕಬ್ಜಯಲ್ಲಿಯು ಇರುತ್ತದೆ. (ಕಾಲಂ ನಂ.9 ಮತ್ತು 12) ಮತ್ತು ಮೇಲೆ ಹೇಳಲಿದ ಮಾರಾಟ ಪತ್ರವು ನನ್ನ ಕಕ್ಷಿದಾರರ ಲಿಂಕ್ ದಾಖಲೆಯಾಗಿದ್ದು ಮತ್ತು ಈ ಮಾರಾಟ ಪತ್ರವು VERITAS Finance Ltd. ಸಾಲದ ದಾಖಲೆಗಳಿಗೆ ಲೀಂಕ್ ದಾಖಲೆಯಾಗ್ಗಿದ್ದು ಇದನ್ನು ನನ್ನ ಕಕ್ಷಿದಾರರ ಮೂಲ ದಾಖಲೆಯಾದ ಮಾರಾಟ ಪತ್ರ ನಂ. 1603/2013-14 ಪತ್ರವು ಕಾಣೆಯಾಗಿದ್ದು/ಕಳೆದುಕೊಂಡಿರುತ್ತದೆ ಮತ್ತು ಇದರ ಬಗ್ಗೆ ಈಗಾಗಲೆ ದಿನಾಂಕ : 20-06-2026 ರಂದು ದಾಖಲೆ ಕಳೆದ ಬಗ್ಗೆ ಪೋಲಿಸರಿಗೆ ಮಾಹಿತಿಯನ್ನು ಲಾಸ್ಟ ನಂ. 2265109/2026ರಂತೆ ದಿನಾಂಕ : 15-06-2026ರ ಮತ್ತು ದಿನಾಂಕ : 20-06-2026ರ ನಡುವೇ ಕಳೆದ ಬಗ್ಗೆ ಮಾಹಿತಿಯನ್ನು ನೀಡಿರುತ್ತಾರೆ ಮತ್ತು ಈ ಸಾರ್ವಜನಿಕ ಪ್ರಕಟಣೆಯ ಮೂಲಕ ಎಲ್ಲರಿಗೂ ಮಾಹಿತಿಯನ್ನು ನೀಡುತ್ತಿದ್ದೇನೆ. ಒಂದು ವೇಳೆ ಯಾರಿಗಾದರೂ ಏನಾದರು ಆಕ್ಷೇಪ, ತಕರಾರು ಏನಾದರೂ ಇದ್ದರೆ 07 ಏಳು ದಿನಗಳೊಳಗೆ ಸಲ್ಲಿಸಲು ಈ ಮೂಲಕ ಸಾರ್ವಜನಿಕರಿಗೆ ಸೂಚನೆ/ಮಾಹಿತಿ ನೀಡುತಿದ್ದೇನೆ.

ಸಹಿ/- ಶಂಕರಪ್ಪ ಕೆ ರಾವ್
ವಕೀಲರು, ಸೇಡಂ.
ಮೊಬೈಲ್ ನಂ.: 8971123712

ದಿನಾಂಕ : 29-06-2026
ಸ್ಥಳ : ಸೇಡಂ

MANAPPURAM FINANCE LTD.
CIN : L65910KL1992PLC006623
Registered Office : W - 4/ 638A, Manappuram House, P.O. Valapad, Thrissur - 680 567, Kerala, India

ಹರಾಜು ಪ್ರಕಟಣೆ

ಈ ಕೆಳಗಿನ ಖಾತೆಗಳಲ್ಲಿ ಅಡವಿಟ್ಟಿರುವ ಚಿನ್ನಾಭರಣಗಳ ಸಾರ್ವಜನಿಕ ಹರಾಜನ್ನು 16/07/2026 ರಂದು ಬೆಳಿಗ್ಗೆ 10.00 ಗಂಟೆಯಿಂದ ಈ ಕೆಳಗಿನ ಶಾಖೆಗಳಲ್ಲಿ ನಡೆಸಲು ಉದ್ದೇಶಿಸಲಾಗಿದೆ ಎಂದು ಈ ಮೂಲಕ ವಿಶೇಷವಾಗಿ ಸಾಲಗಾರರಿಗೆ ಮತ್ತು ಸಾರ್ವಜನಿಕರಿಗೆ ತಿಳಿಸಲಾಗಿದೆ. ನೋಂದಾಯಿತ ಪತ್ರಗಳ ಮೂಲಕ ತಿಳಿಸಲಾಗಿದ್ದರೂ ಸಾಲದ ಮೊತ್ತವನ್ನು ಪಾವತಿಸಲು ವಿಫಲರಾದ ಸುಸ್ತಿದಾರ ಗ್ರಾಹಕರ ಚಿನ್ನದ ಆಭರಣಗಳನ್ನು ಹರಾಜು ಮಾಡಲಾಗುತ್ತದೆ. ಹರಾಜಾಗದ ವಸ್ತುಗಳನ್ನು ಯಾವುದೇ ಸೂಚನೆ ಇಲ್ಲದೆ ಬೇರೆ ಯಾವುದೇ ದಿನಗಳಲ್ಲಿ ಹರಾಜು ಮಾಡಲಾಗುವುದು. ಹರಾಜಿನ ದಿನಾಂಕದಂದು ಚಿನ್ನದ ಮಾರುಕಟ್ಟೆ ಬೆಲೆ ಅಥವಾ ಸರಾಸರಿ 30 ದಿನಗಳ IBJA ದರದ 85%, ಯಾವುದು ಹೆಚ್ಚೋ ಅದರ ಆಧಾರದ ಮೇಲೆ ಮೀಸಲು ಬೆಲೆಯನ್ನು ನಿಗದಿಪಡಿಸಲಾಗುತ್ತದೆ. ಸ್ಥಳ ಅಥವಾ ದಿನಾಂಕದಲ್ಲಿನ ಬದಲಾವಣೆಯನ್ನು (ಯಾವುದಾದರೂ ಇದ್ದರೆ) ಹರಾಜು ಕೇಂದ್ರದಲ್ಲಿ ಮತ್ತು ಕಂಪನಿಯ ವೆಬ್‌ಸೈಟ್‌ನಲ್ಲಿ ಪ್ರದರ್ಶಿಸಲಾಗುತ್ತದೆ. ಕೆಳಗೆ ನೀಡಲಾದ ವಿವರಗಳು ಶಾಖೆಯ ಹೆಸರು, ಸಾಲದ ಸಂಖ್ಯೆ, ಗ್ರಾಹಕರ ಹೆಸರು, ಒಟ್ಟು ಬಾಕಿ ಮೊತ್ತ ('ನಲ್ಲಿ) ಐಟಂ ಹೆಸರಿನ ಕ್ರಮದಲ್ಲಿದೆ

ಅಡವುಗಳ ಪಟ್ಟಿ :

ಗುಲ್ಬರ್ಗ, ಅಫ್ಜಲ್ ಪುರ್, 2044, ಶೋಭಾ ಸೊನ್ನ, 100000/-, ಫಿಂಗರ್ ರಿಂಗ್ಸ್ 1,ಮಟ್ಟಿ 1,ಡ್ರಾಪ್ಸ್ & ಸ್ಟಡ್ 1, 8272, ದಿಗಂಬರ್, 244409/-, ಫಿಂಗರ್ ರಿಂಗ್ಸ್ 1,ನೆಕ್ ಲೇಸ್ 1,ಉ-ಡ್ರಾಪ್ಸ್ 1,ಚೈನ್ 1, 0132970730028295, ಅರುಣಕುಮಾರ್, 23201/-, ಉ-ಡ್ರಾಪ್ಸ್ 1, 0132970730028361, ಶ್ರೀನಿವಾಸ್, 31023/-, ಚೈನ್ 1, ಗುಲ್ಬರ್ಗ, ಆಳಂದ, 4570, ಬಸವರಾಜ್, 30907/-, ಫಿಂಗರ್ ರಿಂಗ್ಸ್ 1, ಬೀದರ್, ಔರಾದ್, 4730, ಯೋಹಾನ್, 35037/-, ಡ್ರಾಪ್ಸ್ & ಸ್ಟಡ್ 1, ಬೀದರ್, ಬಸವಕಲ್ಯಾಣ, 3697, ಗಣೇಶ್, 31000/-, ಫಿಂಗರ್ ರಿಂಗ್ಸ್ 1, 5436, ಉಮೇಶ್, 74810/-, ಮಟ್ಟಿ 1,ಇಯರ್ ರಿಂಗ್ಸ್ 1,ಡ್ರಾಪ್ಸ್ & ಸ್ಟಡ್ 1, 0134350730025653, ರಾಜಕುಮಾರ್, 40172/-, ಡ್ರಾಪ್ಸ್ & ಸ್ಟಡ್ 1, ಬೀದರ್, ಭಾಲ್ಕಿ ಬೀದರ್, 1991, ಲಕ್ಷ್ಮಿಕಾಂತ, 15000/-, ಫಿಂಗರ್ ರಿಂಗ್ಸ್ 1, 0124770700032008, ಅಬ್ರಹಾಮ್, 30000/-, ಫಿಂಗರ್ ರಿಂಗ್ಸ್ 1, 0124770700032052, ಪ್ರಭಾಕರ, 16500/-, ಫಿಂಗರ್ ರಿಂಗ್ಸ್ 1, ಭಾಲ್ಕಿ ಮೇನ್ ರೋಡ್, 1574, ಯೋಗೇಶ್, 326130/-, ಫಿಂಗರ್ ರಿಂಗ್ಸ್ 1,ಬ್ರೇಸ್ ಲೆಟ್ 1,ಸ್ಟಡ್ 1,ಚೈನ್ 1, 0126020730021575, ಯೋಗೇಶ್, 272640/-, ಚೈನ್ 1, ಬೀದರ್, ಬೀದರ್, 2237, ಕಾಳೆ ಸೋಮನಾಥ, 33000/-, ಫಿಂಗರ್ ರಿಂಗ್ಸ್ 1,ಸ್ಟಡ್ 1, 0113840700062239, ಸುಧಾಕರ್, 71500/-, ಫಿಂಗರ್ ರಿಂಗ್ಸ್ 1, 0113840700062407, ಸುಶೀಲ್ ಪಾಟೀಲ್, 84500/-, ಚೈನ್ 1, 3060, ಶ್ರೀಕಾಂತ್, 286490/-, ಬ್ಯಾಂಗಲ್ 1, ಬೀದರ್ ಬಿ ವಿ ಬಿ ಕಾಲೇಜ್ ರಸ್ತೆ, 7136, ಸಂತೋಷ್, 21450/-, ಫಿಂಗರ್ ರಿಂಗ್ಸ್ 1, 0113440730027400, ರೊಮಾನಾ ಫಾತಿಮಾ, 31563/-, ಫಿಂಗರ್ ರಿಂಗ್ಸ್ 1, ಬೀದರ್, ಚಿಟಗುಪ್ಪ ಬಸ್ ಸ್ಟಾಂಡ್, 7768, ಮೋಹಮ್ಮದ್ ಕಾಸಿಮ್, 16000/-, ಉ-ಡ್ರಾಪ್ಸ್ 1, ಚಿಟಗುಪ್ಪ, 1326, ಜೋಹರ್ಷ, 19300/-, ಲಾಕೆಟ್ 1, 4794, ಮುಬೀನಾ , 41836/-, ಉ-ಡ್ರಾಪ್ಸ್ & ಸ್ಟಡ್ 1, 0123900730014803, ಎಂ ಡಿ ಖಾಸಿಂ ಸಬ , 25520/-, ಲಾಕೆಟ್ 1, 0123900730018241, ಅರವಿಂದ್, 513000/-, ಬ್ಯಾಂಗಲ್ 1, ಗುಲ್ಬರ್ಗ, ಚಿತ್ತಾಪುರ, 2763, ಲಕ್ಷ್ಮಣ್ ಶರಣು ರಾಥೋಡ್, 37990/-, ಫಿಂಗರ್ ರಿಂಗ್ಸ್ 1, ರಾಯಚೂರು, ದೇವದುರ್ಗಾ, 8132, ವೆಂಕಟೇಶ್, 16000/-, ಸ್ಟಡ್ 1, 8265, ಪರಶುರಾಮ್, 109902/-, ಫಿಂಗರ್ ರಿಂಗ್ಸ್ 1,ಸ್ಟಡ್ 1,ಉ-ಡ್ರಾಪ್ಸ್ & ಸ್ಟಡ್ 1,ಚೈನ್ 1, 0122280730018290, ಸುರೇಶ್ , 25560/-, ಫಿಂಗರ್ ರಿಂಗ್ಸ್ 1, 0122280730018393, ಬಸವರಾಜ್, 96507/-, ಫಿಂಗರ್ ರಿಂಗ್ಸ್ 1,ಚೈನ್ 1, 0122280730018398, ಗುಲಪ್ಪ, 32307/-, ಫಿಂಗರ್ ರಿಂಗ್ಸ್ 1, 0122280730018420, ಚನ್ನಮ್ಮ, 30007/-, ಫಿಂಗರ್ ರಿಂಗ್ಸ್ 1, ರಾಯಚೂರು, ಗಂಜ್ ಮೇನ್ ರೋಡು, 4603, ಶರಣ ಬಸವ, 28320/-, ಉ-ಡ್ರಾಪ್ಸ್ 1, ಗುಲ್ಬರ್ಗ, ಗುಂಜ್ ರೋಡು ಗುಲಬರ್ಗಾ, 9478, ಕಲ್ಯಾಣರಾವ್ , 65000/-, ಚೈನ್ 1, 3663, ವಿನಯ್ ಚವ್ಹಾಣ್, 59037/-, ಚೈನ್ 1, ಬೀದರ್, ಹುಮ್ನಾಬಾದ್, 1114, ಸಚಿನ್, 62000/-, ನೆಕ್ ಲೇಸ್ 1, 3291, ಬಸವರಾಜ್, 110002/-, ಬ್ರೇಸ್ ಲೆಟ್ 1,ಚೈನ್ 1, ಗುಲ್ಬರ್ಗ, ಜೇವರ್ಗಿ, 3861, ಹುಸೇನ್ಪಾಟ್ಲ್ , 30442/-, ಚೈನ್ 1, 0136250730033975, ಅಹಿಫ್, 56720/-, ನೆಕ್ ಲೇಸ್ 1, ರಾಯಚೂರು, ಕುಷ್ಟಗಿ ರೋಡು ಸಿಂಧನೂರು, 3736, ಟಿ ಗೋಪಾಲಕೃಷ್ಣ, 123549/-, ನೆಕ್ ಲೇಸ್ 1, 0104210730033738, ರುಕ್ಮಣಿ, 21680/-, ಉ-ಡ್ರಾಪ್ಸ್ 1, ರಾಯಚೂರು, ಮಾನ್ವಿ, 1040, ಜಯಮ್ಮ, 127502/-, ಸ್ಟಡ್ 1,ನೆಕ್ ಲೇಸ್ 1,ಮಟ್ಟಿ 1,ಉ-ಡ್ರಾಪ್ಸ್ 1,ಚೈನ್ 1, 0110700730024558, ಮಹಮ್ಮದ್ ಅಜೀಜ್, 26630/-, ಫಿಂಗರ್ ರಿಂಗ್ಸ್ 1, ಗುಲ್ಬರ್ಗ, ಓಮ್‌ನಗರ ಗುಲಬರ್ಗಾ, 2512, ಗುರುರಾಜ್, 17400/-, ಸ್ಟಡ್ 1, 0848, ರಾಹುಲ್, 66038/-, ಚೈನ್ 1, ರಾಯಚೂರು, ರಾಯಚೂರು - ಎಮ್.ಜಿ ರೋಡು, 5588, ತಿಮ್ಮಾಳಮ್ಮ, 120002/-, ಚೈನ್ 1, ರಾಯಚೂರು, ರೈಲ್ವೆ ಸ್ಟೇಷನ್ ರೋಡು ರಾಯಚೂರು, 9828, ಅನಂತ್ ಲಕ್ಷ್ಮಿ, 31334/-, ಸ್ಟಡ್ 1, ಗುಲ್ಬರ್ಗ, ಸೇಡಮ್, 9697, ಚಂದ್ರಶೇಖರ್, 57900/-, ಚೈನ್ 1, 0122790700059784, ಲಾಲಹಮದ್, 23900/-, ಉ-ಡ್ರಾಪ್ಸ್ 1, 6391, ರಿಯಾಜುದ್ದೀನ್ ಹಕೀಂ, 62836/-, ಉ-ಡ್ರಾಪ್ಸ್ 1,ಚೈನ್ 1, ಯಾದಗಿರಿ, ಶಹಾಪುರ, 7251, ಮುತ್ಯಾಳು ಸನ್ನಿ, 31200/-, ಫಿಂಗರ್ ರಿಂಗ್ಸ್ 1, 2421, ವೆಂಕಟಪ್ಪ ನಾಯಕ ಜಾಗೀರದಾರ, 46654/-, ಚೈನ್ 1, ರಾಯಚೂರು, ಸಿಂಧನೂರು, 1994, ಸೀತಾರಾಮ್ ನಾಯಕ್, 50468/-, ಫಿಂಗರ್ ರಿಂಗ್ಸ್ 1, ಗುಲ್ಬರ್ಗ, ಸೂಪರ್ ಮಾರ್ಕೆಟ್ ಗುಲಬರ್ಗಾ, 7099, ಜೀನತ್ ಜಹಾನ್, 22900/-, ಉ-ಡ್ರಾಪ್ಸ್ 1, ಗುಲ್ಬರ್ಗ, ತಿಮ್ಮಾಪುರ ಸರ್ಕಲ್ ಗುಲಬರ್ಗಾ, 1462, ಭೀಮಶಂಕರ್, 82075/-, ಬ್ಯಾಂಗಲ್ 1, 0126190730039417, ನಾಗೇಂದ್ರ, 28540/-, ಫಿಂಗರ್ ರಿಂಗ್ಸ್ 1, 0126190730039596, ಹನಮಂತ ಕಣ್ಣಿ, 37999/-, ಫಿಂಗರ್ ರಿಂಗ್ಸ್ 2, ಗುಲ್ಬರ್ಗ, ಟಿಪ್ಪು ಸುಲ್ತಾನ್ ಚೌಕ ಗುಲಬರ್ಗಾ, 3303, ಅಮ್ಮೆರ್ ಶೇಕ್, 63000/-, ಫಿಂಗರ್ ರಿಂಗ್ಸ್ 1,

ಮೇಲಿನ ಹರಾಜಿನಲ್ಲಿ ಭಾಗವಹಿಸಲು ಬಯಸುವ ವ್ಯಕ್ತಿಗಳು ಈ ಮುಂದೆ ತಿಳಿಸಿರುವುದನ್ನು ಅನುಸರಿಸತಕ್ಕದ್ದು:- ಆಸಕ್ತಿಯುಳ್ಳ ಸವಾಲು ಕೂಗುವವರು (ಬಿಡ್ಡರ್ ಗಳು) ಎನ್‌ಇಎಫ್ ಟಿ/ಆರ್ ಟಿಜಿಎಸ್ ವಿಧಾನದ ಮೂಲಕ ರೂ. 10,000/ ಅನ್ನು ಇಎಂಡಿ (ವಿಫಲಗೊಂಡ ಸವಾಲು ಕೂಗುವವರಿಗೆ ಮರುಪಾವತಿಯಾಗುವಂಥದ್ದು) ಆಗಿ ಹರಾಜಿನ ದಿನದಂದೇ ಸಲ್ಲಿಸಬೇಕು. ಸವಾಲು ಕೂಗುವವರು ಮಾನ್ಯವಾದ ಐಡಿ ಕಾರ್ಡ್/ಪ್ಯಾನ್ ಕಾರ್ಡ್ ಇಟ್ಟುಕೊಂಡಿರಬೇಕು. ಹೆಚ್ಚಿನ ವಿವರಗಳಿಗಾಗಿ ದಯವಿಟ್ಟು 9072607147 ಅನ್ನು ಸಂಪರ್ಕಿಸಿ.

ಅಧಿಕೃತ ಅಧಿಕಾರಿ.
ಮಣಪ್ಪುರಂ ಫೈನಾನ್ಸ್ ಲಿ. ಪರವಾಗಿ

ದಸ್ತಾಪುರ: ಕಾರಹುಣ್ಣಿಮೆ ಸಡಗರ

ಎತ್ತುಗಳಿಗೆ ಸಿಂಗಾರ, ಪೂಜೆ | ಹರಕೆ ರೂಪದಲ್ಲಿ ಕರು ಅರ್ಪಣೆ

• **ಕನ್ನಡ ಪ್ರಭ ವಾರ್ತೆ** ಕಮಲಾಪುರ

ಪ್ರತಿ ವರ್ಷದಂತೆ ಈ ವರ್ಷವೂ ಜೂನ್ ತಿಗಳಲ್ಲಿ ಆಚರಣೆ ಮಾಡುವ ರೈತರ ಹಬ್ಬ ದಸ್ತಾಪುರದಲ್ಲಿ ಮನೆ ಮಾಡಿದ ಮುಂಗಾರು ಸ್ವಾಗತ, ಕಾರ ಹುಣ್ಣಿಮೆ ಸಂಭ್ರಮ ಸಂಪ್ರದಾಯಕವಾಗಿ ಆಚರಿಸಲಾಯಿತು.

ಪ್ರತಿ ವರ್ಷವೂ ಬೇಸಿಗೆ ಮುಗಿದು ಮಳೆ ಆರಂಭವಾಗುವ ಸಮಯದಲ್ಲಿ ಬರುವ ಈ ಹಬ್ಬವು ರೈತನಹಬ್ಬಎಂದುಕರೆಯಲಾಗುತ್ತದೆ. ಈದಿನದಂದು ರೈತರು ತಮ್ಮ ಎತ್ತುಗಳನ್ನು ಸಿಂಗಾರಗೊಳಿಸಿ ಪೂಜಿಸುತ್ತಾರೆ. ಮುಂಗಾರಿನ ಮೊದಲ ಹಬ್ಬ ಎಂದು ಕರೆಯುವ ಕಾರು ಹುಣ್ಣಿಮೆ ಸಂಭ್ರಮ ಸಡಗರದಿಂದ ಸೋಮವಾರ ಎತ್ತುಗಳನ್ನು ಅಲಂಕರಿಸಿ ರೈತರು ಮನೆಯಲ್ಲಿ ಸಿಹಿ ಹೋಳಿಗೆ ಮಾಡಿ ಎತ್ತುಗಳಿಗೆ ಬಗೆ ಬಗೆಯ ಬಾಣಗಳಿಂದ ಅಲಂಕಾರ ಗೊಳಿಸಿ ವೈವಿಧ್ಯ ಇಟ್ಟು ಪೂಜಿಸಿ ಗ್ರಾಮದ ಪ್ರಮುಖ ಬೀದಿಗಳಲ್ಲಿ ಎತ್ತಿನ ಬಂಡಿ ಕಟ್ಟಿಕೊಂಡು ಬಂಡೆಯಲ್ಲಿ ಕುಂತು ಎತ್ತುಗಳನ್ನು ಓಡಿಸುತ್ತಾ ಸಂಭ್ರಮ ಪಟ್ಟರು. **ಕರಿಕಡಿವ ಕಾರ್ಯಕ್ರಮ:** ಗ್ರಾಮದ ಆರಾಧ್ಯ ದೈವ ದೇವರಾಗಿರುವ ಹನುಮಾನ ದೇವಸ್ಥಾನದಲ್ಲಿ ಗ್ರಾಮದ ಹಿರಿಯರು ಪ್ರಮುಖರು ಯುವಕರು ಎಲ್ಲರೂ ಸೇರಿಕೊಂಡು ಪ್ರತಿ ವರ್ಷ ಹನುಮಾನ ದೇವಸ್ಥಾನದ ಜಾತ್ರೆ ಮಹೋತ್ಸವದಲ್ಲಿ ಭಕ್ತರು ಹರಕೆಯ ರೂಪದಲ್ಲಿ ಕರುವನ್ನು ದೇವಸ್ಥಾನಕ್ಕೆ ಅರ್ಪಿಸುತ್ತಾರೆ.

ಎತ್ತುಗಳನ್ನು ಅಲಂಕಾರಗೊಳಿಸಿರುವುದು.

ಗ್ರಾಮದ ಲಕ್ಷ್ಮಿ ದೇವರ ಗುಂಡು ಎತ್ತುತ್ತಿರುವ ರೈತ ಯುವಕರು.

ಇಂದ್ರಪಾಡ ಹೊಸಳ್ಳಿ: ಕುಡಿವ ನೀರಿಲ್ಲ

ಬಸವರಾಜ್ ಹೊಸಮನಿ ಮಾಹಿತಿ | ಪರಿಹಾರ ಕ್ರಮಕ್ಕೆ ಮನವಿ

• **ಕನ್ನಡಪ್ರಭ ವಾರ್ತೆ** ಚಿಂಚೋಳಿ

ತಾಲೂಕಿನ ಇಂದ್ರಪಾಡ ಹೊಸಳ್ಳಿ ಗ್ರಾಮದಲ್ಲಿ ಬೋರವೆಲ್ ಕೆಟ್ಟುಹೋಗಿ ತಿಂಗಳು ಕಳೆದರೂ ದುರಸ್ತಿ ಕಾರ್ಯ ಮಾಡದೇ ಗ್ರಾಮದಲ್ಲಿ ಕುಡಿವ ನೀರಿನ ಸಮಸ್ಯೆ ಉಂಟಾಗಿದೆ ಎಂದು ಗ್ರಾಮಸ್ಥ ಬಸವರಾಜ್ ಹೊಸಮನಿ ತಿಳಿಸಿದ್ದಾರೆ.

ಗ್ರಾಮದಲ್ಲಿ ಜನರು ಕುಡಿಯುವ ನೀರಿನ ಸಮಸ್ಯೆ ಎದುರಿಸುತ್ತಿದ್ದರು ಸಹ ಗ್ರಾಮ ಪಂಚಾಯಿತಿ ಪಿಡಿಒ, ತಾಲೂಕ ಪಂಚಾಯಿತಿ ಅಧಿಕಾರಿಗಳು ಜಾಣ ಕಿವುಡರಂತೆ ವರ್ತಿಸುತ್ತಿದ್ದಾರೆ ಎಂದು ಅವರು ಆರೋಪಿಸಿದ್ದಾರೆ. ಗ್ರಾಮದಲ್ಲಿ ದನಕರುಗಳಿಗೆ ಕುಡಿಯಲು ನೀರಿಲ್ಲ. ಗ್ರಾಮದ 2 ಕಿ.ಮೀ ಅಂತರದಲ್ಲಿರುವ ನಾಲೆಯಲ್ಲಿ ಇರುವ ಬೋರವೆಲ್ ಗೆ ಹೋಗಿ ನೀರು ತಂದು ಕುಡಿಯುವ ಪರಿಸ್ಥಿತಿ ಉಂಟಾಗಿದೆ. ಚಿಕ್ಕ ಮಕ್ಕಳು ಮಹಿಳೆಯರು ತಲೆಯ ಮೇಲೆ ನೀರಿನ ಕೊಡಗಳು ಹೊತ್ತುಕೊಂಡು ತರುವುರಿಂದ ಮಕ್ಕಳು ತೊಂದರೆ ಪಡುವಂತಾಗಿದೆ ಎಂದು ಹೇಳಿದರು.

ಗ್ರಾಮದಲ್ಲಿ ಕೆಟ್ಟು ಹೋದ ಬೋರ್ವೆಲ್ ದುರಸ್ತಿಮಾಡುತ್ತೇವೆಂದು ಮೋಟರ್‌ಸಮೇತ ಕಿತ್ತುಕೊಂಡು ಹೋಗಿದ್ದಾರೆ. ದುರಸ್ತಿ ಮಾಡಿ ಪುನಃ ಮೋಟರ್ ಅಳವಡಿಸಿಲ್ಲ. ಹೀಗಾಗಿ ಕಳೆದ ಒಂದು ತಿಂಗಳಿಂದ ಕುಡಿಯುವ ನೀರಿನ ಸಮಸ್ಯೆ ಎದುರಿಸಬೇಕಾಗಿದೆ. ಮೇಲಾಧಿಕಾರಿ ನಮ್ಮ ಗ್ರಾಮದ ಸಮಸ್ಯೆ ಗಮನಿಸಿಕೂಡಲೇಕುಡಿಯುವ ನೀರಿಗೆ ಬೋರವೆಲ್ ದುರಸ್ತಿ ಮಾಡಿಸಿ ಕೊಡಲುಮನವಿಮಾಡಿಕೊಂಡಿದ್ದಾರೆ.

ಇಂದ್ರಪಾಡ ಹೊಸಳ್ಳಿ ಗ್ರಾಮದಲ್ಲಿ ಕುಡಿಯುವ ನೀರಿನ ಪೂರೈಕೆ ಪೈಪ್ ಒಡೆದಿರುವುದು.

ದಕ್ಷಿಣ ಮಧ್ಯ ರೈಲ್ವೆ
ನಮ್ಮನ್ನು ಅನುಸರಿಸಿ X @SCRailwayindia ಎಸ್.ಸಿ. ರೈಲ್ವೆಯ ಟೆಂಡರ್ ನೋಟೀಸ್‌ಗಳ ವಿವರಗಳನ್ನು ನಮ್ಮ ವೆಬ್‌ಸೈಟ್ www.scr.indianrailways.gov.in ನಲ್ಲಿ ನೋಡಬಹುದಾಗಿದೆ.

No. C/C/ 210HALT/2026 **Dated: 29.06.2026**

ಹಿರಿಯ ವಿಭಾಗೀಯ ವಾಣಿಜ್ಯ ವ್ಯವಸ್ಥಾಪಕರು, ಸಿಕಂದರಾಬಾದ್ ವಿಭಾಗ, ದಕ್ಷಿಣ ಮಧ್ಯ ರೈಲ್ವೆ, ಇವರು ಭಾರತದ ರಾಷ್ಟ್ರಪತಿಗಳ ಪರವಾಗಿ ಮತ್ತು ಸಲುವಾಗಿ ವಾಣಿಜ್ಯ ಒಪ್ಪಂದಗಳಿಗೆ ಸಂಬಂಧಗಳಿಗೆ ಅರ್ಹ ಏಜಂಟ್ ಗುತ್ತಿಗೆದಾರರಿಂದ ಸ್ಥಳೀಯ ನಿವಾಸಿಗಳಿಂದ ಮಾತ್ರ 5 ವರ್ಷಗಳ ಅವಧಿಗೆ ಅರ್ಜಿ ಆಹ್ವಾನಿಸಿದ್ದಾರೆ.

ಕ್ರ.ಸಂ.	ನಿಲ್ಲುವ ನಿಲ್ದಾಣ	ನಿಲ್ದಾಣದ ಕೋಡ್	ಸರ್ವಿಂಗ್ ನಿಲ್ದಾಣ
1	ಕನಾಜಿ	ಕೆಎನ್ಎಜಿ	ಬೀದರ್

ಅರ್ಜಿ ನಮೂನೆ, ಅರ್ಹತಾ ಮಾನದಂಡಗಳು ಮತ್ತು ಇತರೆ ವಿವರಗಳಿಗಾಗಿ ವೆಬ್‌ಸೈಟ್ www.scr.indianrailways.gov.in ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು.
ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ 21.07.2026ರ 15.00 ಗಂಟೆಗಳು.
ತೆರೆಯುವ ದಿನಾಂಕ 21.07.2026ರ 15.30 ಗಂಟೆಗಳು.
ಅರ್ಜಿ ಫಾರಂಗಳನ್ನು ನೋಂದಾವಣಿ ಅಂಚೆ ಜೊತೆಗೆ ಸ್ವೀಕೃತಿಯೊಂದಿಗೆ ನಿಗದಿತ ಸೀಲ್ ಮಾಡಿ ಸಲ್ಲಿಸುವುದು ಖುದ್ದಾಗಿ ಹಿರಿಯ ವಿಭಾಗೀಯ ವಾಣಿಜ್ಯ ವ್ಯವಸ್ಥಾಪಕರು, ಸಿಕಂದರಾಬಾದ್ ವಿಭಾಗ, 1ನೇ ಮಹಡಿ, ಸಂಚಲನಾ ಭವನ್, ಸಿಕಂದರಾಬಾದ್- 500071 ಇಲ್ಲಿಯ ಕಛೇರಿಗೆ 21.07.2026ರ 15.00 ಗಂಟೆಯೊಳಗೆ ಸಲ್ಲಿಸುವುದು. ಒಂದು ವೇಳೆ ಸರ್ಕಾರಿ ರಜೆ ಇದ್ದಲ್ಲಿ, ಮುಂದಿನ ಕೆಲಸದ ದಿನಗಳಂದು ಕೊನೆಯ ದಿನಾಂಕದ ಒಳಗೆ ಸಲ್ಲಿಸುವುದು. ತಡವಾದ/ ನಿಧಾನವಾಗಿ ತಲುಪುವ ಅರ್ಜಿಗಳನ್ನು ಸ್ವೀಕರಿಸಲಾಗುವುದಿಲ್ಲ.
ಮೇಲೆ ತಿಳಿಸಲಾದ ಅರ್ಜಿಗಳನ್ನು ಯಾವುದೇ ಕಾರಣಗಳನ್ನು ತಿಳಿಸದೆ ರೈಲ್ವೆ ಆಡಳಿತ ಮಂಡಳಿ ತಿರಸ್ಕರಿಸುವ ಅಥವಾ ಮುಂದೂಡುವ ಅಧಿಕಾರವನ್ನು ಹೊಂದಿರುತ್ತದೆ. ಇಲ್ಲಿ ತೆಗೆದುಕೊಳ್ಳುವ ನಿರ್ಧಾರವು ಅಂತಿಮವಾಗಿರುತ್ತದೆ.
ಇತರೆ ವಿವರಗಳಿಗಾಗಿ, ದಯವಿಟ್ಟು ಕಛೇರಿಯ ಕೆಲಸಹಿದಾರರನ್ನು ಯಾವುದೇ ಕೆಲಸದ ದಿನಗಳಂದು ಸಂಪರ್ಕಿಸಬಹುದು.

PUB/409/26
A479 ಹಿರಿಯ ವಿಭಾಗೀಯ ವಾಣಿಜ್ಯ ವ್ಯವಸ್ಥಾಪಕರು, ಸಿಕಂದರಾಬಾದ್

CAUTION - Readers are advised to make appropriate enquiries while responding to advertisements in these columns. Kannada Prabha Publications Ltd., does not vouch for any claims made by the advertisers. The Printer, Publisher, Editor and Owner of Kannada Prabha Publications Ltd., shall not be held responsible/ liable for any consequences, in case such claims are found to be false. ಕನ್ನಡಪ್ರಭ

we are HIRING
asianet ಸುವರ್ಣ ನ್ಯೂಸ್
ನೇರ. ದಿಟ್ಟ. ನಿರಂತರ
ಕನ್ನಡಪ್ರಭ

Company Secretary

Eligibility
* 3+ years of relevant experience
* Graduate CS
* Good communication with kannada and English
* Job location - Bangalore

How to Apply
Send your resume to: careers@suvarnanews.in

Apply before: 30th June 2026

ಶಿಕ್ಷಣ-ಸಾಮಾಜಿಕ ವಲಯದಲ್ಲಿ ಛಾಪು ಮೂಡಿಸಿರುವ ಮಹಿಳಾ ಸಾಧಕಿ

ಪೂಜಾ ಸಜೇಶ್

• **ಟಿ.ಎಸ್. ಮಂಜುನಾಥ್, ವಿರಾಜಪೇಟೆ**

ಕೊಡಗು ಜಿಲ್ಲೆಯ ವಿರಾಜಪೇಟೆಯ ಪೂಜಾ ಸಜೇಶ್ ಶಿಕ್ಷಣ ಹಾಗೂ ಸಮಾಜ ಸೇವೆಯಲ್ಲಿ ತೊಡಗಿಸಿಕೊಳ್ಳುವ ಮೂಲಕ ಮಾದರಿ ಮಹಿಳಾ ಸಾಧಕಿಯಾಗಿದ್ದು, ಪ್ರತಿಷ್ಠಿತ ಕನ್ನಡಪ್ರಭ-ಏಷ್ಯಾನೆಟ್ ಸುವರ್ಣನ್ಯೂಸ್ ನಿಂದ ಸುವರ್ಣ ಕನ್ನಡಿಗ ಪ್ರಶಸ್ತಿಗೆ ಭಾಜನರಾಗಿದ್ದಾರೆ.

ಪೂಜಾ ಅವರು, ವಿರಾಜಪೇಟೆ ಲಿಟಲ್ ಸ್ಕಾಲರ್ಸ್ ಅಕಾಡೆಮಿಯ ಅಧ್ಯಕ್ಷರು, ಗೋಲ್ಡನ್ ಬೀನ್ಸ್ ಲಕ್ಸುರಿ ಹೋಂ ಸ್ಟೇಂನ ಎಂಡಿ ಹಾಗೂ ಎಂಪವರಿಂಗ್ ವುಮೆನ್ ಎನ್ ಜಿ ಒ ಸಂಸ್ಥೆಯ ಫೌಂಡರ್ ಆಗಿ ಕಾರ್ಯ ನಿರ್ವಹಿಸುತ್ತಿದ್ದಾರೆ.

ಆರ್ಥಿಕವಾಗಿ ಹಿಂದುಳಿದ ವಿದ್ಯಾರ್ಥಿಗಳಿಗೆ ಸಹಾಯ ಹಸ್ತ ನೀಡುವ ಮೂಲಕ ಜನ ಮೆಚ್ಚುಗೆ ಗಳಿಸಿದ್ದಾರೆ. ಹೆಗ್ಗಳ ಸರ್ಕಾರಿ ಶಾಲೆಗೆ ಮುಖ್ಯದ್ವಾರ ನಿರ್ಮಾಣ, ರಾಮನಗರ ಶಾಲೆಗೆ ಅಗತ್ಯವಾದ ತಡೆಗೋಡೆ ಕಟ್ಟಿಸಿಕೊಟ್ಟಿದ್ದಾರೆ. ಅಮ್ಮತ್ತಿ ಸರ್ಕಾರಿ ಶಾಲೆಗೆ ಅಗತ್ಯವಾದ ಪ್ರಿಂಟರ್ ಒದಗಿಸಿದ್ದಾರೆ.

ಸರ್ಕಾರಿ ಶಾಲೆಯಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಟ್ರ್ಯಾಕ್ ಸೂಟ್, ಟೀ ಶರ್ಟ್ ನೀಡುತ್ತಿದ್ದಾರೆ. 300ಕ್ಕೂ ಹೆಚ್ಚು ವಿದ್ಯಾರ್ಥಿಗಳಿಗೆ ಸಮವಸ್ತ್ರ ನೀಡುತ್ತಿದ್ದಾರೆ. ಸಮಾಜ ಸೇವೆಯಲ್ಲಿ ತೊಡಗಿಸಿಕೊಂಡಿರುವ ಪೂಜಾ ಅವರು, ಎಷ್ಟೋ ಬಡ ಕುಟುಂಬದ ವಿದ್ಯಾರ್ಥಿಗಳು ಉತ್ತಮ ಶಿಕ್ಷಣ ಪಡೆಯುವಲ್ಲಿ ಸಹಾಯಕರಾಗಿದ್ದಾರೆ.

ವಿರಾಜಪೇಟೆ ಸಮೀಪದ ಹೆಗ್ಗಳ ಗ್ರಾಮದಲ್ಲಿರುವ ವೃದ್ಧಾಶ್ರಮಕ್ಕೆ ಅಗತ್ಯವಾದ ಪರಿಕರ ಪೂರೈಸಿದ್ದಾರೆ. ಇಲ್ಲಿಗೆ ಭೇಟಿ ನೀಡಿ ಪ್ರತಿಯೊಬ್ಬ ವೃದ್ದರ ಆರೋಗ್ಯ ಕ್ಷೇಮವನ್ನು ವಿಚಾರಿಸುವ ಮೂಲಕ, ವೃದ್ದರಿಗೆ ತಮ್ಮದೇ ಮಗಳು ಹಾರೈಕೆ ನೀಡುತ್ತಿದ್ದಾಳೆಂಬ ಭಾವನೆ ಮೂಡಿಸಿ ಅವರಿಗೆ ಪೂಜಾ ಅವರು ಅಭಯ ತುಂಬಿದ್ದಾರೆ.

ಬಡ ವಿದ್ಯಾರ್ಥಿಗಳಿಗೆ ನೆರವು ನೀಡುತ್ತಾ ಬಂದಿರುವ ಪೂಜಾ, ಅಗತ್ಯ ಇರುವವರ ಉನ್ನತ ವಿದ್ಯಾಭ್ಯಾಸಕ್ಕೂ ನೆರವು ನೀಡುತ್ತಾ ಬಂದಿದ್ದಾರೆ. ಇವರ ನೆರವಿನಿಂದ ಶಿಕ್ಷಣ ಪಡೆದ ವಿದಾರ್ಥಿಗಳು ಉದ್ಯೋಗವನ್ನು ಕೂಡ ಪಡೆದುಕೊಂಡಿದ್ದಾರೆ. ಆಸ್ಪತ್ರೆ ಸಹಯೋಗದಲ್ಲಿ ಸಾರ್ವಜನಿಕರಿಗೆ ಉಚಿತವಾಗಿ ಆರೋಗ್ಯ ತಪಾಸಣಾ ಶಿಬಿರ ಆಯೋಜಿಸಿದ್ದಾರೆ. ಕೋವಿಡ್ ಹಾಗೂ ಪ್ರಕೃತಿ ವಿಕೋಪ ಸಂದರ್ಭದಲ್ಲಿ ಸಂಕಷ್ಟಕ್ಕೆ ಸಿಲುಕಿದ ಕುಟುಂಬಗಳಿಗೆ ಅಗತ್ಯ ವಸ್ತುಗಳ ಕಿಟ್ ನೀಡುವುದರ ಮೂಲಕ ಮಾನವೀಯತೆ ಮೆರೆದಿದ್ದಾರೆ.

> ವಿರಾಜಪೇಟೆಯಲ್ಲಿ ಲಿಟ್ಲ್ ಸ್ಕಾಲರ್ಸ್ ಅಕಾಡೆಮಿ ಸ್ಥಾಪಿಸಿ ಕಡಿಮೆ ಶುಲ್ಕದಲ್ಲಿ ಉತ್ತಮ ಶಿಕ್ಷಣ ನೀಡುತ್ತಿದ್ದಾರೆ. ಎಲ್ಲಾ ವಿಷಯಗಳ ಬೋಧನೆಯನ್ನು ಚಟುವಟಿಕೆ ಆಧಾರದಲ್ಲಿ ಕಲಿಸುವ ಈ ಶಿಕ್ಷಣ ಸಂಸ್ಥೆ ವಿದ್ಯಾರ್ಥಿ, ಪೋಷಕರನ್ನು ಆಕರ್ಷಿಸುತ್ತಿದೆ. ವಿರಾಜಪೇಟೆಯ ನಾಂಗಾಲದಲ್ಲಿ 2.5 ಎಕರೆ ಪ್ರದೇಶದಲ್ಲಿ ಅತ್ಯಾಧುನಿಕ ಸುಸಜ್ಜಿತ ಶಾಲೆ ನಿರ್ಮಾಣವಾಗುತ್ತಿದ್ದು, ಲೋಕಾರ್ಪಣೆಗೆ ಸಿದ್ಧಗೊಂಡಿದೆ. ಟರ್ಫ್ ಮೈದಾನ, ಈಜುಕೊಳ ಸೇರಿದಂತೆ ಹಲವು ಸೌಲಭ್ಯಗಳು ಇರಲಿದೆ.

ತಮ್ಮದೆ ಶಿಕ್ಷಣ ಸಂಸ್ಥೆ ಇದ್ದರೂ ತಮ್ಮೂರು ಹೆಗ್ಗಳದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಅಭಿವೃದ್ಧಿಗೂ ತಮ್ಮದೇ ಆದ ಕೊಡುಗೆ ನೀಡುತ್ತಿದ್ದಾರೆ ಪೂಜಾ ಸಜೇಶ್. ವಿದ್ಯಾರ್ಥಿಗಳೇ ಇಲ್ಲದೆ ಈ ಶಾಲೆ ಮುಚ್ಚಿಹೋಗುತ್ತದೆ ಎನ್ನುವ ಪರಿಸ್ಥಿತಿ ಎದುರಾದಾಗ ಆ ಶಾಲೆಗೆ ಅಂದ ಚಂದವಾಗಿ ಸುಣ್ಣಬಣ್ಣ ಬಳಿಸಿ, ಶಾಲೆಗೆ ಕಂಪ್ಯೂಟರ್ ವ್ಯವಸ್ಥೆ ಕಲ್ಪಿಸಿ ಅದಕ್ಕೊಂದು ಇನೋವೇಟರ್ ಕೂಡ ಕೊಡಿಸಿದ್ದಾರೆ. ಹೀಗೆ ಶಾಲೆಗೆ ಮೂಲಭೂತ ಸೌಲಭ್ಯ ಕಲ್ಪಿಸಿದ ಬಳಿಕ ಶಾಲೆಯಲ್ಲಿ ಇದೀಗ 25 ವಿದ್ಯಾರ್ಥಿಗಳು ದಾಖಲಾಗಿದ್ದಾರೆ. ಇವರ ಅರ್ಥದಲ್ಲಿ ಸಮಾಜದಲ್ಲಿ ಆಗುತ್ತಿರುವ ಅನ್ಯಾಯ, ಅನಾಚಾರಗಳ ತಡೆಗಟ್ಟಲು ಶಿಕ್ಷಣವೇ ಆಧಾರ. ಹೀಗಾಗಿ ಶಿಕ್ಷಣ ಎಲ್ಲರಿಗೂ ಸಿಗಬೇಕು ಎಂಬುದೇ ಪೂಜಾ ಸಜೇಶ್ ಅವರ ಆಶಯ.

ಈ ಬಾರಿ ತಮ್ಮ ಶಾಲೆಯಲ್ಲಿ ಆರ್ಥಿಕವಾಗಿ ಹಿಂದುಳಿದ ಒಂದು ಬಾಲಕಿಗೆ ಉಚಿತ ಶಿಕ್ಷಣ ನೀಡುವವ್ಯವಸ್ಥೆಮಾಡಿದ್ದಾರೆ. ವಿರಾಜಪೇಟೆಯಿಂದ ಹೆಗ್ಗಳ ಗ್ರಾಮಕ್ಕೆ ಉಚಿತ ಆಂಬ್ಯುಲೆನ್ಸ್ ಸೇವೆ ನೀಡುವ ಯೋಜನೆ ಹಾಕಿಕೊಂಡಿದ್ದಾರೆ.

ಎಂಪವರಿಂಗ್ ವುಮೆನ್

ಶಿಕ್ಷಣ ಅಷ್ಟೇ ಅಲ್ಲ, ಸಾಮಾಜಿಕ ಸೇವೆಯಲ್ಲಿ ಇವರು ತಮ್ಮನ್ನು ತಾವು ಸಾಕಷ್ಟು ತೊಡಗಿಸಿಕೊಂಡಿದ್ದಾರೆ. ಮಹಿಳಾ ಸ್ವಸಹಾಯ ಸಂಘಗಳಿಗೆ ತಮ್ಮದೇ ರೀತಿಯಲ್ಲಿ ಸಹಾಯ ಮಾಡುವುದು ಇವರ ಪ್ರವೃತ್ತಿ. ಸ್ವತಃ ಎಂಪವರಿಂಗ್ ವುಮೆನ್ ಎಂಬ ಎನ್‌ಜಿಒ ಕಟ್ಟಿದ್ದರೂ ಎಲ್ಲಾ ಮಹಿಳಾ ಸ್ವಸಹಾಯ ಸಂಘಗಳಿಗೆ ಸಹಾಯ ಮಾಡುತ್ತಾ, ಅವುಗಳ ಕಾರ್ಯಕ್ರಮಗಳಲ್ಲಿ ಭಾಗವಹಿಸುತ್ತಾ ಮಹಿಳಾ ಸಬಲೀಕರಣಕ್ಕೆ ತಮ್ಮ ವಿಚಾರಧಾರೆ ನೀಡುತ್ತಿದ್ದಾರೆ.